Sri R. CHENNIGARAMAIAH.—This letter applies to expansion.

ಶ್ರೀ ಎ. ಮುನಿಯಪ್ಪ:—ಹರಿಜನ ಕೇರಿ ಕಡೆಯ ಬಾರ್ಡರಿನಲ್ಲಿ ಇದೆ ಎಂದು ಹೇಳಿದಿರಿ. ಆದ್ದರಿಂದ ಸಾಧ್ಯವಾಗಿಲ್ಲವೆಂದು ಕೈಬಿಟ್ಟಿದ್ದೀರಾ? ರಾಯ ಚೂರಿನಲ್ಲಿ ಸ್ಮಶಾನಕ್ಕೆ ಲೈಟ್ ಹಾಕುವುದು ಗೊತ್ತಿದೆಯೇ?

ಅಧ್ಯಕ್ಷರು.— ಸ್ಮಶಾನ ನೋಡಿ ಬಂದಿದ್ದೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೈಬಿಟ್ಟಿಲ್ಲ. ನದ್ಯಕ್ಕೆ ಹಾಕುವುದಕ್ಕೆ ಸ್ವಲ್ಪ ಕಷ್ಟವಿದೆ.

ಶ್ರೀ ಎ. ಮುನಿಯಪ್ಪ.—ತಾವೂ ಹನುಮಯ್ಯನವರೂ ಕತ್ತಲಲ್ಲಿ ಅಲ್ಲಿ ಕುಳಿತುಕೊಂಡಿದ್ದುದು ತಮ್ಮ ಗಮನಕ್ಕೆ ಬರಲಿಲ್ಲವೊ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕತ್ತಲಲ್ಲಿ ಕುಳಿತಿದ್ದರಿಂದ ಪೆಟ್ರೋಮ್ಯಾಕ್ಸ್ ಲೈಟ್ ಇಟ್ಟಿದ್ದರು.

Sri M. MALLIKARJUNASWAMY.—In view of the fact that there are not sufficient number of lights at present in the Harijan Colony will the Government consider the feasibility of putting more lights there?

Sri R. CHENNIGARAMAIAH.—I will take immediate action to see that necessary instructions are given to the Municipality to instal some more lights.

Sri J. P. SARWESH.—In view of the fact that Harijans are forced to shift and have their colonies on the borders of the Municipal limits in almost all the talukas what steps have been taken . . .

Mr. SPEAKER.—That has nothing to do with this.

ಶ್ರೀ ಎಂ. ಹನುಮಂತಯ್ಯ.—ತಾವು ರಾಯಚೂರು ಹರಿಜನ ಕಾಲೊನಿಗೆ ಹೋಗಿ ಎಷ್ಟು ದಿವಸವಾಯಿತು?

ಶ್ರೀ ಆರ್. ಚೆನ್ನಿಗರಾಮಯ್ಯ.—ಐದಾರು ತಿಂಗಳುಗಳಾದುವು.

ಶ್ರೀ ಟಿ. ಹನುಮಯ್ಯ.—ಇಷ್ಟು ದಿವಸದಿಂದ ದೀಪ ಏಕೆ ಹಾಕಲಿಲ್ಲ?

ಅಧ್ಯಕ್ಷರು.—ಉತ್ತರ ಕೊಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯ.—ಮಾನ್ಯ ಮಂತ್ರಿಗಳು ಭೇಟಿ ಕೊಟ್ಟಿದ್ದೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೌದು. ಕಾನ್‌ಫರೆನ್ಸೂ ಆಯಿತು. ಲೆಕ್ಚರೂ ಆಯಿತು ಆವಾಗ ಇದ್ದರುವ ನನ್ನ ಸ್ನೇಹಿತರೂ, ಇನ್ನೂ ಕೆಲವರೂ ಇದ್ದರೂ.

ಶ್ರೀ ಟಿ. ಹನುಮಯ್ಯ.—ದೀಪಗಳು ಇವೆಯೇನು?

ಅಧ್ಯಕ್ಷರು.—ದೀಪ ಕಡಮೆ ಇದೆಯೆಂದು ಹೇಳಿದರು.

Income of each Company under the Management of KGF.

Q.—779. Sri G. SIVAPPA (Chitaldrug).—

Will the Government be pleased to state:—

the income of each Company under the management of K.G.F. Mining Company from the year 1953 up to Nationalisation?

A.—Sri S. NIJALINGAPPA (Chief Minister).—

Mysore Gold Mining Co (K.G.F.) Ltd.—

			Rs. in lakhs.
1953	...	...	4·88
1954	...	...	4·88
1955	...	...	—2·73 (Loss)
1956*	...	...	—8·23 (Loss)

Champion Reef Gold Mines of India (K.G.F.) Ltd—

			Rs. in lakhs.
1953	...	...	Nil
1954	...	...	2·01
1955	...	...	0.55
1956*	...	...	—0·67 (Loss)

Nandydoorg Mines (K.G.F.) Ltd.—

			Rs. in lakhs.
1953	...	...	2·26
1954	...	...	2·26
1955	...	...	3·77
1956*	...	...	Nil

*(to date of nationalisation, *viz.* 28th November 1956).

Sri G. SIVAPPA.—Sir, my question was, what is the income of each company under the management of K.G.F. Mining Company from the year 1953 up to date whereas it has been changed to what is the income of each company under the mangement of K.G.F. Mining Company from the year 1953 up to nationalisation?

ಅಧ್ಯಕ್ಷರು.—ಮಾನ್ಯ ಸದಸ್ಯರು ಕಳುಹಿಸಿರುವ ಪ್ರಶ್ನೆಯಲ್ಲಿ the income of each company under the management of K.G.F. Mining Company from the year 1953 up

(ಅಧ್ಯಕ್ಷರು)

to date" ಎಂದು ಕೇಳಿದ್ದಾರೆ. ಆದರೆ nationalise ಆದ ಮೇಲೆ ಕಂಪೆನಿ ಉಳಿಯುವುದಿಲ್ಲ. 28ನೆಯ ನವೆಂಬರ್ 1956ರಲ್ಲಿ ರಾಷ್ಟ್ರೀಕರಣವಾಗಿದೆ; ಆದಕಾರಣ ಹೀಗೆ ಬದಲಾಯಿಸಿದೆ.

ಶ್ರೀ ಜಿ. ಶಿವಪ್ಪ.—Up to date ಅಂಕಿಅಂಶಗಳನ್ನು ಕೊಟ್ಟಿದ್ದರೆ ಮುಂದೆ ಪ್ರಶ್ನೆಗಳನ್ನು ಕೇಳಬಹುದು.

ಅಧ್ಯಕ್ಷರು.—ತಾವು ಕೇಳಿದುದು "income of each company" ಎಂದು. ರಾಷ್ಟ್ರೀಕರಣವಾದ ಮೇಲೆ ಕಂಪೆನಿ ಉಳಿಯುವುದಿಲ್ಲ. ಆದುದರಿಂದ ಇದು ಕೂಡ up to date ಎಂತಲೇ ಆಗುತ್ತದೆ.

ಶ್ರೀ ಜಿ. ಶಿವಪ್ಪ.—ಹಾಗಿದ್ದರೆ ಮುಂದೆ ಪ್ರಶ್ನೆಗಳನ್ನು ಕೇಳುವುದೇ ಕಷ್ಟವಾಗುತ್ತದೆ.

Sri H. C. LINGA REDDY.—How do the incomes and profits for the years 1955 and 1956 compare with those after nationalisation ?

Mr SPEAKER.—That does not arise. As I have explained just now, the question is a little bit ambiguous. When it was sent to the office, the office found that after the nationalisation there would be no companies at all. That is why it has been amended to the effect that the income of each company should be up to the day of nationalisation. So, the question of income after nationalisation does not arise.

Sri H. C. LINGA REDDY.—What are the reasons for the losses during the years 1955 and 1956 in the Mysore Gold Mining Company and the Champion Reef ?

*Sri S. NIJALINGAPPA.—The Mysore Government was not functioning then. The John Taylor & Sons were managing them. So, I cannot understand why there were losses then !

Sri C. K. RAJAIAH SETTY.—was there any lease period left at the time of nationalisation ?

Sri S. NIJALINGAPPA.—I think there was some period left.

Sri C. K. RAJAIAH SETTY.—If that is the case, though there was a lease for a continuous period of three years, why did the Government nationalise it ?

Sri S. NIJALINGAPPA.—I cannot answer that question.

ಒಬ್ಬ ಸದಸ್ಯರು.—ಮೈಸೂರು ಚಿನ್ನದ ಗಣಿಯಲ್ಲಿ 1955ರಲ್ಲಿ 2·73 ಲಕ್ಷ ರೂಪಾಯಿ 1956ರಲ್ಲಿ 8·23 ಲಕ್ಷ ರೂಪಾಯಿ ನಷ್ಟವೆಂದು ತೋರಿಸಿದ್ದಾರೆ. 1956ರಲ್ಲಿ ರಾಷ್ಟ್ರೀಕರಣವಾಗುತ್ತದೆಂಬುದನ್ನು ತಿಳಿದು ಈ ಎರಡು ವರ್ಷಗಳಲ್ಲಿ ಹೀಗೆ ನಷ್ಟವಾಗಿದೆ ಎಂದು ಉದ್ದೇಶಪೂರ್ವಕವಾಗಿ ತೋರಿಸಿದ್ದಾರೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಹೇಗೆ ಒಪ್ಪಿಕೊಳ್ಳುವುದು ? ಆ ರೀತಿ ಟೀಕೆ ಮಾಡುತ್ತೀರಿ, ಅಷ್ಟೆ.

Purchase of Lands from Depressed Class People in Hattihalli.

Q.—822. Sri G. N. PUTTANNA (Tumkur).—

Will the Government be pleased to state :—

whether they are aware that the lands granted free to the Depressed Class people in Hattihalli and other villages in Gandinasiyara Hobli, Turuvekere Taluk, have been purchased by others against the conditions laid down relating to free grant of lands ?

A.—Sri M. P. PATIL (Minister for Revenue).—

Yes.

ಶ್ರೀ ಜಿ. ಎಸ್. ಪುಟ್ಟಣ್ಣ.—ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರದಲ್ಲಿ ಹೇಳಲಾಗಿದೆ. ಹಾಗಿದ್ದರೆ, ಎಲ್ಲೆಲ್ಲಿ ಈ ರೀತಿ ನಿಮ್ನವರ್ಗದವರಿಗೆ ಸರ್ಕಾರ ಕೊಟ್ಟಿರುವ ಜಮೀನುಗಳನ್ನು ಮಾರಿದ್ದಾರೆಂಬ ಬಗ್ಗೆ ತಕ್ಷಣ ವರದಿಗಳನ್ನು ತರಿಸಿ, ಇಂಥಾ ಕೇಸುಗಳಲ್ಲಿ ನೂಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ?

*ಶ್ರೀ ಎಂ. ಪಿ. ಪಾಟೀಲ್.—ಒಟ್ಟು 19 ಕೇಸುಗಳಿವೆ. ಇವುಗಳಲ್ಲಿ 4 ಕೇಸುಗಳು ಹಟ್ಟಿಹಳ್ಳಿಯಲ್ಲಿವೆ. ಈ ನಂದರ್ಭಗಳಲ್ಲಿ ಜಮೀನನ್ನು ರೆಸ್ಯೂಮ್ ಮಾಡಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ರಿಸಂಪ್ಷ್ ಆರ್ಡರ್ ಆಗಿದೆ, ಆದರೆ possession ತೆಗೆದುಕೊಂಡಿಲ್ಲ.

ಶ್ರೀ ಎಂ. ಪಿ. ಪಾಟೀಲ್.—ರೆಸ್ಯೂಂ ಮಾಡಬೇಕೆಂದು ಆರ್ಡರ್ ಆಗಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಆದರೆ ಯಾರು ಭೂಮಿಯನ್ನು ತೆಗೆದುಕೊಂಡಿದ್ದಾರೋ ಅವರ ಸ್ವಾಧೀನದಲ್ಲೇ ಇದೆ, ಇನ್ನೂ ರೆಸ್ಯೂಂ ಆಗಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri M. P. PATIL.—I am not aware. Possibly, there might be some cases. They might have filed suits. Steps will be taken by the Government in all these cases.

ಶ್ರೀ ಜಿ. ಎಸ್. ಪುಟ್ಟಣ್ಣ.—ಸರ್ಕಾರ ಬಡವರ ಉದ್ಧಾರಕ್ಕಾಗಿ ಕೊಟ್ಟ ಜಮೀನನ್ನು ಬೇಕಾದವರು ಈ ರೀತಿ ಕೊಂಡುಕೊಂಡರೆ ಹೇಗೆ ? ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೇ ?

Sri M. P. PATIL.—It is a matter of opinion, but as I said the Government is taking steps in all these cases.